**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಸಿ.ಸಿ. ಸಂಖ್ಯೆಃ 2186/2023</u>**

**ಸಿ.ಡಬ್ಲ್ಯೂ: 1 /ಪಿ.ಡಬ್ಲ್ಯೂಃ 1**

**ಪ್ರಮಾಣೀಕರಿಸಿದ ದಿನಾಂಕಃ 20.2.24**

| | |
|---|---|
| ಹೆಸರು | ಗುರುಮೂರ್ತಿ ರೆಡ್ಡಿ |
| ತಂದೆಯ ಹೆಸರು | ಅಪ್ಪೋಜಿ ರೆಡ್ಡಿ |
| ವಯಸ್ಸು | 34 ವರ್ಷ |
| ವೃತ್ತಿ | ವ್ಯವಸಾಯ |
| ಸ್ಥಳ | ಅಲ್ಲಿಕಲ್ಲು |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-</u>**

ಚಾಸ-2 ರಿಂದ 5 ರವರ ಪರಿಚಯವಿದೆ. ಆರೋಪಿತರ ಪರಿಚಯವಿಲ್ಲ. ದಿಃ 12.7.22 ರಂದು ಸರ್ಕಾರಿ ಶಾಲೆಯಲ್ಲಿ ಮಳೆ ನೀರು ಕೊಯ್ಲು ಯೋಜನೆ ಅಡಿಯಲ್ಲಿ ಗುಂಡಿ ತೆಗೆದಿದ್ದು, ಸದರಿ ಗುಂಡಿಯನ್ನು ಮುಚ್ಚದೇ ಇದ್ದುದರಿಂದ ಚಾಸ-4 ರವರಿಗೆ ಮುಚ್ಚುವಂತೆ ಹೇಳಿರುತ್ತೇನೆ. ನಂತರ ನಾನು ಕೆ ಜಿ ಎಫ್ ನಿಂದ ಹೋಗುತ್ತಿದ್ದಾಗ ಚಾಸ-5 ರವರು ಸಿಕ್ಕಿದ್ದು ಅವರನ್ನೂ ಕೂಡ ಶಾಲೆ ಬಳಿ ಕರೆದುಕೊಂಡು ಹೋಗಿ, ಗುಂಡಿಯನ್ನು ತೋರಿಸುತ್ತಿದ್ದಾಗ 1 ನೇ ಆರೋಪಿಯು ಬಂದು ನನಗೆ ಏನು ಕೆಲಸ ಇದೆ ಎಂದು ಕೇಳಿದ್ದು, ದೊಣ್ಣೆ ತೆಗೆದುಕೊಂಡು ಹೊಡೆದಿರುತ್ತಾರೆ. ನಂತರ 2 ನೇ ಆರೋಪಿಯು ಬಂದು ಅಲ್ಲಿ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ನನ್ನ ಬಲಬದಿಯ ಹಣೆಗೆ ಹೊಡೆದಿರುತ್ತಾನೆ. ಸದರಿ ಗಲಾಟೆಯನ್ನು ಚಾಸ-4 ರವರು ಬಿಡಿಸುತ್ತಿದ್ದಾಗ ಪುನಃ ಆರೋಪಿತರು ಬಂದು ನನಗೆ ಕೈ ಗಳಿಂದ ಹೊಡೆದಿರುತ್ತಾರೆ. ಆಗ ನಾನು ಸದರಿ ಸ್ಥಳದಿಂದ ತಪ್ಪಿಸಿಕೊಂಡು ಹೋಗುತ್ತಿದ್ದಾಗ, ಚಾಸ-3 ರವರು ನನ್ನನ್ನು ಬೈಕಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಚಿಕಿತ್ಸೆಗೆ ಕೆ ಜಿ ಎಫ್ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ.

ನಂತರ ಅದೇ ದಿನ ಸಂಜೆ ಪೊಲೀಸರು 8 ರಿಂದ 8.15 ಗಂಟೆ ಸಮಯದಲ್ಲಿ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಮರುದಿನ ಪೊಲೀಸರು ಆಸ್ಪತ್ರೆಗೆ ಬಂದಿದ್ದು, ಶಾಲೆಯಲ್ಲಿನ ಮಳೆ ಕೊಯ್ಲು ಕಾಮಗಾರಿಯನ್ನು 1 ನೇ ಆರೋಪಿಯು ಮಾಡಿದ್ದು, ಈ ಕುರಿತು ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ಗಲಾಟೆ ಆದ ಸಮಯದಲ್ಲಿ ಆರೋಪಿತರು ನನಗೆ ಜೀವ ತೆಗೆಯುವುದಾಗಿ ಜೀವದ ಬೆದರಿಕೆ ಹಾಕಿರುತ್ತಾರೆ.

ನಾನು ನೀಡಿದ ದೂರನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತರು ನನಗೆ ಹೊಡಿಬಡಿ ಮಾಡಿದ ಕೋಲು ಮತ್ತು ಕಲ್ಲನ್ನು ನೋಡಿ ಗುರ್ತಿಸುತ್ತೇನೆ. ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿ ಗುರ್ತಿಸುತ್ತೇನೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಸಅ ರವರು ಕೋರಿದ್ದು, ಅನುಮತಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ಮಂಜುನಾಥ. ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.